

# ಹೆಮ್ಮರದ ಎಲೆಯೊಂದು ಉದುರಿ ಮಣ್ಣಾದಂತೆ...

**ಚರಿತ್ರೆಯ ಉಪನ್ಯಾಸಕ ಭೂಹಳ್ಳಿ ಪುಟ್ಟಸ್ವಾಮಿ ಅವರು ಹಚ್ಚಿಟ್ಟ ಆದರ್ಶದ ಹಣತೆ ನಮ್ಮ ಸುತ್ತಣವನ್ನು ನಿರಂತರ ಬೆಳಗುತ್ತಲೇ ಇರುತ್ತದೆ. ದುಡಿಮೆಯ ಲಕ್ಷ ಲಕ್ಷ ರೂಪಾಯಿಗಳನ್ನು ಮರಗಿಡಗಳಿಗೆ ಸುರಿದು, ಕೋಟಿ ಕೋಟಿ ರೂಪಾಯಿಯ ಪ್ರಾಣವಾಯು ಸೃಜಿಸಿದ ಸಾಧನೆ ಅವರದು.**

■ **ಜಯಶಂಕರ ಹಲಗೂರು**

ನಮ್ಮ ವೈಯಕ್ತಿಕ ವೃತ್ತಿ ಪ್ರವೃತ್ತಿ, ಬಾಳಿನ ಏಳುಬೀಳುಗಳು, ಬದುಕಿನ ಸಂತಸ ವ್ಯಸನಗಳ ನಡುವೆ ಪ್ರತಿಯೊಬ್ಬರೂ ಜನಮೆಚ್ಚುವ ಕಾರ್ಯಗಳಲ್ಲಿ ತೊಡಗಬೇಕು ಎಂಬುದು ಸಮಾಜದ ನಿರೀಕ್ಷೆ. ಜನಮೆಚ್ಚುವ ಕಾರ್ಯ ಎನ್ನುವುದೇ ಸಾಪೇಕ್ಷವಾದುದು. ಯಾವುದು ಜನಾದರಣೀಯ, ಜನಪರ ಎನ್ನುವುದನ್ನು ನಿರ್ಧರಿಸುವುದೇ ಕಷ್ಟ. ಉಪನ್ಯಾಸಕರಾಗಿದ್ದ ಭೂಹಳ್ಳಿ ಪುಟ್ಟಸ್ವಾಮಿ ಅವರು ಬೋಧನೆಯ ಜೊತೆಗೆ ಜನಪರವಾದ ಕಾಯಕದಲ್ಲಿ ತೊಡಗಿಸಿಕೊಳ್ಳಬೇಕು ಎಂದು ಬಯಸಿ ಬದುಕಿದ ಆದರ್ಶವಾದಿ. ಅವರು ಬೆಳೆಸಿರುವ ಮರಗಳಂತೆ ನಮ್ಮೊಳಗೆ ಸದಾ ನಳನಳಿಸುವ ಚೈತನ್ಯವಿರುವ ಅನನ್ಯ ಪರಿಸರ ಪಾಲಕ. ನಾವು ಮನಸ್ಸು ಮಾಡಿದರೆ, ಪರಿಸರಕ್ಕೆ ಕೊಡುಗೆ ಆಗಬಹುದು ಎಂಬುದಕ್ಕೆ ಭೂಹಳ್ಳಿ ಅಪರೂಪದ ನಿದರ್ಶನ.

ರಾಜ್ಯದ ಹಲವೆಡೆ ಭೂಹಳ್ಳಿ ಪುಟ್ಟಸ್ವಾಮಿ ಇತಿಹಾಸವನ್ನು ಬೋಧಿಸಿದ್ದಾರೆ. ತಮ್ಮ ಕೊನೆ ದಿನಗಳಲ್ಲಿ ಚನ್ನಪಟ್ಟಣದ ಸುತ್ತಮುತ್ತ ಅಸಂಖ್ಯ ಮರಗಿಡಗಳನ್ನು ಬೆಳಸಿ ‘ಹಸುರು ಚರಿತ್ರೆ’ಯನ್ನೇ ಸೃಷ್ಟಿಸಿದ್ದಾರೆ. ಅವರ ಹುಟ್ಟೂರು ಚನ್ನಪಟ್ಟಣ ತಾಲ್ಲೂಕಿನ ಭೂಹಳ್ಳಿಯಲ್ಲಿ ‘ಕವಿವನ’ ಎಂಬ ಹೆಸರಿನ ದಟ್ಟ ಪುಟ್ಟ ಅರಣ್ಯವನ್ನೇ ರೂಪಿಸಿದ್ದಾರೆ. ನಮ್ಮ ಪುರಾಣದ ಅರ್ಧನಾರೀಶ್ವರನ ಪರಿಕಲ್ಪನೆಯಂತೆ, ಕವಿವನದಲ್ಲಿ ಅರ್ಧ ಬುದ್ಧ ಅರ್ಧ ಈಶ್ವರನ ಶಿಲಾ ಪ್ರತಿಮೆ ಕೆತ್ತಿಸಿ ಬುದ್ಧೇಶ್ವರ ಎಂದು ಹೆಸರಿಟ್ಟಿದ್ದಾರೆ. ಸ್ವತಃ ಲೇಖಕರೂ ಆಗಿದ್ದ ಭೂಹಳ್ಳಿ ಪುಟ್ಟಸ್ವಾಮಿ ಕವಿವನದಲ್ಲಿ ಹಲಬಗೆಯ ಸಾಹಿತ್ಯಕ ಚಟುವಟಿಕೆಗಳನ್ನೂ ನಡೆಸಿದ್ದರು.

ಚನ್ನಪಟ್ಟಣ ಸಾತನೂರು ರಸ್ತೆಯ ಮಹದೇಶ್ವರ ದೇವಾಲಯದ ಆವರಣದಲ್ಲಿ ‘ಜೀವೇಶ್ವರ ವನ’ ಎಂಬ ಕಾಡನ್ನೇ ಕಟ್ಟಿದ್ದಾರೆ. ತಾವೇ ಸಸಿ ನೆಟ್ಟು ಸಲಹಿದ ಮಾವು, ಬೇವು, ಆಲ, ಅರಳಿ, ಅತ್ತಿ, ನೇರಳೆ ಮೊದಲಾದ ಮರಗಿಡಗಳು ಜೀವಜಾಲದೊಳಗೆ ಬೆರೆತು ಜೀವವೈವಿಧ್ಯ ನಳನಳಿಸುತ್ತಿದೆ. ಚನ್ನಪಟ್ಟಣದ ಸುತ್ತ ‘ಪುಲಕೇಶಿ ವನ’, ‘ನೃಪತುಂಗ ವನ’, ‘ಕದಂಬ ವನ’, ‘ಹೊಯ್ಸಳ ವನ’, ‘ಕನ್ನಡ ವನ’, ‘ಪಂಪ ವನ’, ‘ವಿದ್ಯಾರ್ಥಿ ವನ’, ‘ಹಿತ್ತಲ ಗುಡ್ಡೆ ಕಾಡು’ ಎಂಬ ಹೆಸರಿನ ಕಿರುವನಗಳನ್ನು ಭೂಹಳ್ಳಿ ಪುಟ್ಟಸ್ವಾಮಿ ಬೆಳೆಸಿದ್ದಾರೆ. ಅವರು ಬೆಳೆಸಿದ ಕಾಡುಗಳಿಗೆ ಇಟ್ಟಿರುವ ಹೆಸರುಗಳನ್ನು ಗಮನಿಸಿದರೆ ಕನ್ನಡ ನಾಡುನುಡಿ ಚರಿತ್ರೆಯ ಬಗೆಗೆ ಅವರಿಗಿದ್ದ ಅಭಿಮಾನ ಅರಿವಿಗೆ ಬರುತ್ತದೆ.

## ತಮ್ಮ ದುಡಿಮೆಯಲ್ಲಿ ವನ ಬೆಳೆದು

ಕಾರುಣ್ಯದಿಂದ ಕಾಡು ಪೊರೆದ ಭೂಹಳ್ಳಿ ಪುಟ್ಟಸ್ವಾಮಿ ಅವರು, ಅದರ ಖರ್ಚು ವೆಚ್ಚಕ್ಕೆ ಸರ್ಕಾರ ನಂಬಲಿಲ್ಲ. ಚಂದಾ ವಸೂಲಿ ಮಾಡಲಿಲ್ಲ. ತಮ್ಮ ಸಂಬಳದ ಉಳಿತಾಯ ಮತ್ತು ಪಿಂಚಣಿ ಹಣದಿಂದಲೇ ಇದೆಲ್ಲವನ್ನು ಸಾಧ್ಯವಾಗಿಸಿದ್ದಾರೆ. ‘ಪ್ರಕೃತಿ—ಸಂಸ್ಕೃತಿ ಚಾರಿಟಬಲ್ ಟ್ರಸ್ಟ್ (ರಿ)’ ಎಂಬ ಟ್ರಸ್ಟ್ ಆರಂಭಿಸಿ ಸಸಿ ನೆಟ್ಟು ಪಾಲನೆ ಮಾಡಿದ್ದಾರೆ. ತಮ್ಮ ಸ್ವಂತ ದುಡ್ಡಿನಲ್ಲಿ ಅವರು ಮರಗಿಡಗಳಿಗೆ ಕೊಟ್ಟ ಮಹತ್ವ ಅಪರೂಪದ್ದು. ಸರ್ಕಾರದ ಒಂದು ಇಲಾಖೆ ಮಾಡಲಾಗದ್ದನ್ನು ಮಾಡಿ ತೋರಿದ್ದಾರೆ. ಮನುಷ್ಯ ಪರಿಸರ ಮತ್ತು ಜೀವ ಪರಿಸರದ ಸಮಗ್ರ ಏಳಿಗೆಯನ್ನು ಬಯಸುವ ನಾವು ವಾಸ್ತವದಲ್ಲಿ ಕೇವಲ ಸ್ವಯಂ ಕೇಂದ್ರಿತವಾಗಿ ಕೊಲ್ಲುವ, ಕೊಳ್ಳುವ, ಅನುಭವಿಸುವ ಧೋರಣೆಯಲ್ಲೇ ಬದುಕುತ್ತಿದ್ದೇವೆ. ಇದೇ ನಮ್ಮೆಲ್ಲರ ಆಳದಲ್ಲಿರುವುದರಿಂದ ಭೂಹಳ್ಳಿ ಪುಟ್ಟಸ್ವಾಮಿ ಅಂಥವರ ಕನಸು, ಕಾರ್ಯ, ಸಾಧನೆ ನಮ್ಮ ಲೆಕ್ಕಕ್ಕೆ ಸಿಗಲಾರದು.

ಅನಾರೋಗ್ಯದಿಂದ ರೋಸಿಹೋಗಿದ್ದ ಪುಟ್ಟಸ್ವಾಮಿಯವರು ಇತ್ತೀಚೆಗೆ ಜೀವನವನ್ನು ಕೊನೆಗಾಣಿಸಿಕೊಂಡರು. ಅವರ ಸಾವಿಗೆ ಕನಿಷ್ಠ ಗೌರವವೂ ದೊರಕದೆ ಹೋದದ್ದು ತುಂಬ ವೇದನೆಯ ಸಂಗತಿ. ‘ನೆಲನಾಳ್ವನ ಹೆಣನೆಂದರೆ ಒಂದಡಿಕೆಗೆ ಕೊಂಬರಿಲ್ಲ ನೋಡಯ್ಯಾ’ ಎಂಬ ನಮ್ಮ ಶರಣರು ತೋರಿಸಿದ ದಿಟವ ವ್ಯಂಗ್ಯವಾದರೂ, ಸಹಜೀವಿಗಳಿಗೆ ಕನಿಷ್ಠ ಗೌರವಾನುಭೂತಿ ತೋರುವುದು ನಮ್ಮ ಮೂಲಭೂತ ಕರ್ತವ್ಯವೆಂದೇ ತಿಳಿಯಬೇಕಲ್ಲವೇ?

ಪುಟ್ಟಸ್ವಾಮಿ ತಮ್ಮ ದೇಹ ಅವರೇ ಬೆಳೆಸಿದ ಯಾವುದಾದರೂ ಮರದ ಕೆಳಗೆ ಮಣ್ಣಾಗಬೇಕು ಎಂದು ಬಯಸಿದ್ದರಂತೆ. ಅವರ ಆಸೆ ಈಡೇರಲಿಲ್ಲ. ಅದಕ್ಕೆ ಜನ ಅವಕಾಶ ಕೊಡಲಿಲ್ಲ. ಇದನ್ನು ನೋಡಿದರೆ ಅವರು ತಮ್ಮ ಆದರ್ಶಗಳ ಜೊತೆಗೆ ಜಾತಿ, ಧರ್ಮ, ಅಧಿಕಾರ, ರಾಜಕಾರಣದೊಳಗೆ ತಮ್ಮನ್ನು ಪ್ರಚಾರದ ಸರಕನ್ನಾಗಿ ಮಾಡಿಕೊಳ್ಳಬೇಕಿತ್ತೇನೋ? ಅದೆಲ್ಲ ಅಪಥ್ಯ ಎಂಬ ಆದರ್ಶ ಮೆರೆದ ಪುಟ್ಟಸ್ವಾಮಿ ಅವರ ಕಾರ್ಯ ಅನುಗಾಲವೂ ಸ್ಥಿರವಾಗಿ ಉಳಿಯಬಲ್ಲುದು.

ಅವರ ಅಂತ್ಯಸಂಸ್ಕಾರವನ್ನು ಯುವಜನರಲ್ಲಿ ಪರಿಸರ ಕಾಳಜಿ ಉದ್ದೀಪನವಾಗುವಂತೆ ರೂಪಿಸಬಹುದಿತ್ತು. ಕೊನೆಪಕ್ಷ ಅರಣ್ಯ ಇಲಾಖೆ, ಸ್ಥಳೀಯ ಆಡಳಿತವಾದರೂ ಈ ಬಗ್ಗೆ ಗಮನ ಕೊಡಬಹುದಿತ್ತು. ಅವರ ಸಾಧನೆಯನ್ನು ಗೌರವಿಸಿದರೆ ನಮಗೆ ಲಾಭವಿದೆ. ಬೆಳೆಸುವ ಮನಸ್ಸುಗಳಿಗೆ ಅವರು ಆದರ್ಶವಾಗಬೇಕಿದೆ. ನಮ್ಮ ನಡುವೆಯೇ ಇದ್ದ ಅವರು ಯಾವ ಪ್ರಚಾರ ಪ್ರಶಸ್ತಿಗಳಿಲ್ಲದೆ ಮರದಿಂದ ಎಲೆ ಉದುರಿದಂತೆ ನಿರುಮ್ಮಳವಾಗಿ ಕೊನೆಯಾದರು.

ಪ್ರತಿಕ್ರಿಯಿಸಿ: **feedback@sudha.co.in**